**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ.ನಂ.1133/2024**

ಸಿ.ಡಬ್ಲ್ಯು 04
ಪಿ.ಡಬ್ಲ್ಯು 03

ಸಾಕ್ಷಿದಾರರ ಹೆಸರು – **ದಿಲ್‌ಶಾದ್ ಅಬ್ದುಲ್ ರಜಾಕ**
ತಂದೆಯ ಹೆಸರು – ಅಬ್ದುಲ್ ರಜಾಕ
ವಯಸ್ಸು – 32 ವರ್ಷ
ಉದ್ಯೋಗ – ಮನೆ ವಾರ್ತೆ
ವಾಸ್ತವ್ಯ – ಮಂಗಳೂರು

(ಇಂದು ದಿನಾಂಕಃ **09-04-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾವು ಎರಡು ವರ್ಷದ ಹಿಂದೆ ಶಿರ್ಶಿಯಿಂದ ಕುಮಟಾಕ್ಕೆ ಬಸ್ ನಲ್ಲಿ ಪ್ರಯಾಣಿಸುತ್ತಿದ್ದೇವು. ಮಾಸ್ತಿಹಳ್ಳದ ಕಡೆಗೆ ಬಂದಾಗ ನಮ್ಮ ಬಸ್ಸ ಚಾಲಕನು ಬಸ್ಸನ್ನು ವೇಗವಾಗಿ ಹಾಗೂ ನಿರ್ಲಕ್ಷತನದಿಂದ ಚಲಾಯಿಸುತ್ತಿದ್ದು, ಎದುರುಗಡೆಯಿಂದ ಬಂದ ಲಾರಿಗೆ ಢಿಕ್ಕಿ ಹೊಡೆದಿರುತ್ತಾನೆ. ನನ್ನ ಮಗಳಾದ ಜೋಯಾ ಇವಳಿಗೆ ಹಣೆಗೆ ಪೆಟ್ಟಾಗಿರುತ್ತದೆ. ಅಲ್ಲಿದ್ದ ಜನರು ನಮ್ಮನ್ನು ಉಪಚರಿಸಿ ನಮ್ಮನ್ನು ಆಸಪತ್ರೆಗೆ ಸೇರಿಸಿರುತ್ತಾರೆ. ಈ ಅಪಘಾತವು ಬಸ್ಸ ಚಾಲಕನ ತಪ್ಪಿನಿಂದ ಆಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ

ಗುರುತಿಸಿರುತ್ತಾರೆ. ನಾವು ಹೋಗುತ್ತಿದ್ದ ಬಸ್ಸನ್ನು ನ್ಯಾಯಾಲಯದ ಮುಂದೆ ಇದ್ದ ಆರೋಪಿತಯು ಚಾಲಯಿಸುತ್ತಿದ್ದನು.

**(ಈ ಹಂತದಲ್ಲಿ ಷದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಈ ಅಪಘಾತವು ದಿನಾಂಕಃ 09/05/2024 ರಂದು 16-15 ಗಂಟೆಯ ಸುಮಾರಿಗೆ ಆಗಿರುತ್ತದೆ ಎಂದರೆ ಸರಿ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ. ಕುಮಟಾ